ಆಗುತ್ತದೆ. ಆದುದರಿಂದ ಆ ಓ ಸ್ಥಳದಲ್ಲಿ ಸೂಚನಾ ಫಲಕಗಳನ್ನು ಹಾಕಬೇಕು ಎಂದು ಸಲಹೆ ಮಾಡುತ್ತೇನೆ ಮತ್ತು ಇದರ ಜೊತೆಗೆ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರ್ವ್ಸ್ ಏನು ಇದೆ ಅದನ್ನು ತೆಗೆದು ನೇರ ರಸ್ತೆಯನ್ನಾಗಿ ಮಾಡಿದರೆ ಆಕಸ್ಮಿಕವಾಗಿ ಆಗುವಂಥಾ ಘಟನೆಗಳನ್ನು ತಪ್ಪಿಸಬಹುದು ಎಂದು ಸಲಹೆ ಮಾಡುತ್ತೇನೆ. ಪೆಟ್ರೋಲಿಂಗ್ ಪಾರ್ಟಿಯನ್ನು ತಕ್ಷಣವಾಗಿ ತೆರೆಯಬೇಕೆಂದು ಹೇಳುತ್ತೇನೆ ಏತಕ್ಕೆಂದರೆ ಈಗ ಬೆಂಗಳೂರು ಮೈಸೂರಿಗೆ-ಸೇರಿದ ಹಾಗೆ ಒಂದೊಂದು ಡಿಪೋ ಇದೆ. ಒಂದುವೇಳೆ ಚನ್ನಪಟ್ಟಣದಲ್ಲಿ ಬಸ್ಸು ಕೆಟ್ಟುಹೋದರೆ ಅದಕ್ಕೆ ರಿಲೀಫ್ ಗಾಡಿ ತರಿಸಬೇಕಾದರೆ ಬೆಂಗಳೂರಿಗೆ ತಿಳಿಸಬೇಕಾಗುತ್ತದೆ, ಹಾಗೆಯೇ ಮದ್ದೂರಿನಲ್ಲಿ ಬಸ್ ಏನಾದರೂ ಕೆಟ್ಟು ಹೋದರೆ ಅದಕ್ಕೆ ರಿಲೀಫ್ ಗಾಡಿ ತರಿಸಬೇಕಾದರೆ ಮೈಸೂರಿನ ಡಿಪೋವಿಗೆ ಬರೆದು ತರಿಸಿಕೊಳ್ಳಬೇಕಾಗುತ್ತದೆ. ಇದರಿಂದ ತಕ್ಷಣವಾಗಿ ರಿಲೀಫ್ ಗಾಡಿ ಸಿಕ್ಕುವುದಿಲ್ಲ. ಆದುದರಿಂದ ನಾನು ತಮಗೆ ಈ ಸಂದರ್ಭದಲ್ಲಿ ಸಲಹೆ ಕೊಡುವುದೇನೆಂದರೆ ೫೦ ಮೈಲಿ ಅಂತರದಲ್ಲಿ ಒಂದೊಂದು ಡಿಪೋವನ್ನು ತೆರೆಯಬೇಕು ಎಂದು ಹೇಳುತ್ತೇನೆ, ಹಾಗಾದರೆ ಒಂದು ವೇಳೆ ದಾರಿ ಮಧ್ಯೆ ಬಸ್ಸುಗಳು ಕೆಟ್ಟು ಹೋದರೆ ತಕ್ಷಣವಾಗಿ ಆ ಡಿಪೋಗಳಿಗೆ ಬರೆದು ರಿಲೀಫ್ ಗಾಡಿ ತರಿಸ ಬಹುದು. ಮಾನ್ಯ ಮಂತ್ರಿಗಳು ನಾನು ಹೇಳಿದ ತಕ್ಷಣವೇನೋ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅದಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾರೀಖು ೮–೭–೧೯೮೧ ರಂದು ನಾವು ಪ್ರಯಾಣ ಮಾಡುತ್ತಿದ್ದ ಬಸ್ಸಿನ ಡ್ರೈವರ್ ಬಹಳ ಜಾಣಾಕ್ಷತನದಿಂದ ಆಗುವಂಥಾ ದುರಂತವನ್ನು ತಪ್ಪಿಸಿದ್ದಾರೆ. ಆದುದರಿಂದ ಅವನಿಗೆ ಒಂದು ಪ್ರಶಸ್ತಿಯನ್ನು ಕೊಡಬೇಕು ಎಂದು ಹೇಳುತ್ತೇನೆ. ಇನ್ನೂ ಅನೇಕ ಸದಸ್ಯರು ಕೂಡ ಶ್ರೀಮಾನ್ ಘಾಡಿಯವರು ಶ್ರೀಮಾನ್ ಪಾಟೀಲರವರು, ಶ್ರೀಮಾನ್ ಬೆಡಗಿಯವರು ಮುಂತಾದವರು ಆಕ್ಸಿಡೆಂಟ್‌ಕ್ಕೆ ಸಿಕ್ಕಿಹಾಕಿಕೊಂಡಿದ್ದರು. ಆದುದರಿಂದ ನಾನು ಮೊದಲು ಈ ಬಗ್ಗೆ ಎನೇನು ಸೂಚನೆ ಹೇಳಿದೆನೋ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ಎಂ. ಸದೋ್ಯಜಾತ.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ಸಲಹೆಗಳನ್ನು ಕೂಡ ನಾನು ಗಮನದಲ್ಲಿಟ್ಟುಕೊಂಡು ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ನೋಡಿ ತೆಗೆದುಕೊಳ್ಳುತ್ತೇನೆ.

Repesentations by members

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, Post Matric Hostel for Boys and Girls, Rajajinagar, ದಲ್ಲಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳು ಫಸ್ಟ್ ಬಿ. ಕಾಂ., ಮತ್ತು ಸೆಕೆಂಡ್‌ಈಯರ್ ಬಿ. ಕಾಂ., ನಲ್ಲಿ ಏನು ಓದುತ್ತಿದ್ದರು ಅವರ ರಿಸಲ್ಟ್ ಇನ್ನೂ ಬಂದಿಲ್ಲಾ. ಅದು ಕ್ಯಾರಿ ಓವ್ ಸಿಸ್ಟಂ. ಆದರ ರಿಸಲ್ಟ್ ಬಂದ ಹೊರತು ಆ ಹಾಸ್ಟಲಿಗೆ ಅಡ್ಮಿಷನ್ ಮಾಡಿಕೊಳ್ಳುವುದಿಲ್ಲ. ಅವರೆಲ್ಲಾ ಈಗ ಲೆಜಿಸ್ಲೇಚರ್ ಪೋಂನಲ್ಲಿದ್ದಾರೆ, ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದೇನೆಂದರೆ ಅವರ ರಿಸಲ್ಟ್ ಬರಲಿ ಬರದೇ ಇರಲಿ ಅವರನ್ನು ಏತಕ್ಕೆ ಅಡ್ಮಿಷನ್ ಮಾಡಿಕೊಳ್ಳಬಾರದು ಎಂದು ಕೇಳುತ್ತೇನೆ. ಆ ಹಾಸ್ಟಲ್‌ನಲ್ಲಿ ೫೦ ಜನ ಹೆಣ್ಣು ಮಕ್ಕಳು ೧೫೦ ಜನ ಗಂಡು ಮಕ್ಕಳು ಇದ್ದಾರೆ. ಅವರೆಲ್ಲಾ ಈಗ ಎಲ್. ಪೆಚ್. ನಲ್ಲಿದ್ದಾರೆ. ತಾವು ಈ ಬಗ್ಗೆ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಸ್ವಾಮಿ, ಗುಲ್ಬರ್ಗಾ ಇಂಜಿಯರಿಂಗ್ ಕಾಲೇಜಿನ ಅಡ್ಮಿಷನ್ ಬಗ್ಗೆ ತಮ್ಮ ಛೇಂಬರ್‌ನಲ್ಲಿ ಮಾತನಾಡಿದ್ದೆ ಮತ್ತು ಈ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನೂ ಸಹ ಕಳುಹಿಸಿದ್ದೇನೆ.